ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE • AFFILIATED TO BANGALORE UNIVERSITY • AICTE APPROVED • 2(F) & 12 (B) RECOGNITION OF UGC • ISO 9001:2015 CERTIFIED
Electronics City P.O., Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – APRIL/MAY 2026

# KANNADA - IV SEMESTER BSC

# 25BSC41K: ವಿಜ್ಞಾನ ಕನ್ನಡ IV

**Time: 3 Hours.** **Max. Marks: 80**

**I. ಮೂರು ಪ್ರಶ್ನೆಗಳಿಗೆ ಉತ್ತರಿಸಿ (200 ಪದಗಳಿಗೆ ಮೀರದಂತೆ)** 3x10=30

1. ಅಂಬೇಡ್ಕರ್‌ರವರು ಪಾರ್ಸಿ ಅತಿಥಿ ಮಂದಿರದಲ್ಲಿ ಕಳೆದ ಕರಾಳ ದಿನಗಳ ಸ್ವರೂಪವನ್ನು ವಿವರಿಸಿ.
2. ಸಮಾಸ ಎಂದರೇನು? ಯಾವುದಾದರೂ ಆರು ಸಮಾಸಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ.
3. ಲೇಖಕರು ಹೇಳಿದ ಮರೆಯಲಾಗದ ಘಟನೆ ಹಾಗೂ ಬೇಗೂರಿನ ಚೆಲುವೆಯ ಮದುವೆಯ ಪ್ರಸಂಗವನ್ನು ವಿವರಿಸಿ.
4. 'ನೆಲವನ್ನು ಬಿಟ್ಟರೆ ಬದುಕೇ ಕೊನೆಯಾದಂತೆ' ಎಂಬ ಹೇಳಿಕೆಯನ್ನು 'ಮಣ್ಣು ವಿಜ್ಞಾನಿಯ ಸ್ವಗತ' ಲೇಖನದ ಮೂಲಕ ಚರ್ಚಿಸಿ.

**II. ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ (100 ಪದಗಳಿಗೆ ಮೀರದಂತೆ)** 4x5=20

1. ತಂದೆಯ ಚಿಲ್ಲರೆ ಅಂಗಡಿಯಿಂದ ದೇವಿಯ ಕುಟುಂಬದ ಪರಿಸ್ಥಿತಿ ಹೇಗೆ ಬದಲಾಯಿತು?
2. ಸಾಹುಕಾರನ ಹೊಲವನ್ನು ಅಪ್ಪ ಕಾಯುತ್ತಿದ್ದ ಬಗೆ ಹೇಗಿತ್ತು?
3. ಜ್ವಾಲಾಶೆಟ್ಟಿಯು ಹಿಟ್ಟಿನ ಗಿರಣಿಯ ಬಳಿ ದೇವಿಯ ರಾಗಿಯನ್ನು ಚರಂಡಿಗೆಸೆದ ಸಂದರ್ಭವನ್ನು ವಿವರಿಸಿ.
4. ಬಿಲ್ಕಿಸ್ ಬಾನುಳ ಮದುವೆ ಕುರಿತು ಬರೆಯಿರಿ.
5. ಕೆಲಸದಲ್ಲಿ ಸಂವಹನ ಕೌಶಲ್ಯಗಳನ್ನು ಅಭಿವೃದ್ಧಿಗೊಳಿಸಿಕೊಳ್ಳಲು ಇರುವ ಅಗತ್ಯ ಅಂಶಗಳಾವುವು?
6. ಮದುವೆಯ ನಂತರದಲ್ಲಿ ಬಿಲ್ಕಿಸ್ ಬಾನುಳ ಬದುಕು ಹೇಗಿತ್ತು?

**III. ಈ ಕೆಳಕಂಡ ಕಂಡಿಕೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿ.** 1x5=5

ಅದೊಂದು ದಿನ ದೇವಿ ತಂದೆ ಫ್ಯಾಕ್ಟರಿಯಲ್ಲಿ ಕೆಲಸಮಾಡುತ್ತಿದ್ದಾಗ ಅಚಾನಕವಾಗಿ ಅವನ ಬಲಗಾಲ ಮೇಲೆ ಭಾರವಾದ ಕಬ್ಬಿಣದ ವಸ್ತುವೊಂದು ಬಿದ್ದು ಮೂಳೆ ಜಜ್ಜಿ ಹೋಯಿತು. ತಿಂಗಳ ಕಾಲ ಚಿಕಿತ್ಸೆ ಪಡೆದರೂ ಕಾಲು ಬರಲಿಲ್ಲ. ವೈದ್ಯರಿಗೆ ಅದನ್ನು ಕತ್ತರಿಸಿ ಹಾಕಬೇಕಾದುದು ಅನಿವಾರ್ಯವಾಯಿತು. ಕುಂಟನಾದ ದೇವಿಯ ತಂದೆ ಮಾಡುತ್ತಿದ್ದ ಕೆಲಸವನ್ನು ಕೈಬಿಟ್ಟು ಮೂಲೆ ಹಿಡಿಯುವ ಪರಿಸ್ಥಿತಿ ಒದಗಿ ಬಂದಿತು.

**IV. ಕಂಪನಿಯೊಂದರ ಲ್ಯಾಬ್ ಟೆಕ್ನಿಷಿಯನ್ ಹುದ್ದೆಗೆ ಅಭ್ಯರ್ಥನ ಪತ್ರ ಬರೆಯಿರಿ.** 1x5=5

**V. ಕೆಳಕಂಡ ಸನ್ನಿವೇಶ ಆಧರಿಸಿ ಒಂದು ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿ.** 1x5=5

ಹೋಳಿ ಹಬ್ಬದ ಸಂಭ್ರಮ

ST. FRANCIS DE SALES COLLEGE · EXCELLENCE · EFFICIENCY · TRANSFORMATION · ELECTRONICS CITY, BENGALURU

**VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಗೆ ಪರಿವರ್ತಿಸಿ, ಸೂಕ್ತ ಶೀರ್ಷಿಕೆ ನೀಡಿ.** **1x5=5**

ಹತ್ತು ಹನ್ನೆರಡು ಮಂದಿ ಭಾರಿ ಗಾತ್ರದ, ಕೋಪಗೊಂಡಂತೆ ಕಾಣುತ್ತಿದ್ದ ಒರಟು ಪಾರ್ಸಿಗಳು ದೊಣ್ಣೆಗಳನ್ನು ಹಿಡಿದುಕೊಂಡು ನನ್ನ ಕೊಠಡಿಯತ್ತ ಬರುತ್ತಿದ್ದರು. ಅವರು ಪ್ರವಾಸಿ ವಸತಿಗಾರರಲ್ಲ ಎಂಬುದು ನನಗೆ ತಕ್ಷಣ ಹೊಳೆಯಿತು. ನನ್ನ ಊಹೆಗೆ ನಿಜವಾಗಲೂ ಬಹಳ ಹೊತ್ತು ಕಾಯಬೇಕಿರಲಿಲ್ಲ. ಅವರೆಲ್ಲರೂ ನನ್ನ ಕೊಠಡಿಯ ಮುಂದೆ ಸಾಲುಗಟ್ಟಿ ನಿಂತುಕೊಂಡು ಪ್ರಶ್ನೆಯ ಬೆಂಕಿಮಳೆಯನ್ನು ಸುರಿಯತೊಡಗಿದರು. "ಯಾರು ನೀನು? ಇಲ್ಲಿಗೇಕೆ ಬಂದೆ? ಪಾರ್ಸಿಯ ಹೆಸರನ್ನು ಇಟ್ಟುಕೊಳ್ಳಲು ಎಷ್ಟು ಧೈರ್ಯ ನಿನಗೆ? ಘಟಿಂಗ, ದಗಾಕೋರ! ಪಾರ್ಸಿ ಪ್ರವಾಸಿ ಮಂದಿರವನ್ನು ಮೈಲಿಗೆ ಮಾಡಿಬಿಟ್ಟೆಯಲ್ಲ?" ಎಂದರು. ನಾನು ಮೌನವಾಗಿ ನಿಂತಿದ್ದೆ. ನನ್ನ ಬಳಿ ಯಾವ ಉತ್ತರವೂ ಇರಲಿಲ್ಲ. ನಾನು ಪಾರ್ಸಿಯವನೇ ಎಂದು ಪಟ್ಟು ಹಿಡಿಯಲಿಲ್ಲ. ನಾನು ಮಾಡಿದ್ದು ತಪ್ಪು ಮತ್ತು ಆ ತಪ್ಪು ಬಯಲಾಗಿತ್ತು. ನಾನು ಮಾಡಿರುವ ತಪ್ಪನ್ನೇ ಸರಿಯೆಂದು ವಾದಿಸಿದರೆ, ಕೋಪದಿಂದ ಹುಚ್ಚರಾಗಿದ್ದ ಆ ಪಾರ್ಸಿ ಗೂಂಡಾಗಳು ನನ್ನನ್ನು ಚಚ್ಚುವ ಅಪಾಯವಿತ್ತು.

**VII. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** **10x1=10**

1. ಅಂಬೇಡ್ಕರ್‌ರವರನ್ನು ವ್ಯಾಸಂಗಕ್ಕೆ ಕಳಿಸಿದವರು?

   ಅ. ಮೈಸೂರು ಮಹಾರಾಜ ಆ. ಹೈದ್ರಾಬಾದ್ ರಾಜ ಇ. ಬರೋಡ ಮಹಾರಾಜ ಈ. ದೆಹಲಿ ರಾಜ
2. ಬಿಲ್ಕಿಸ್ ಬಾನುಳ ಗೆಳತಿ ಯಾರು?

   ಅ. ಭಾನು ಮುಷ್ತಾಕ್ ಆ. ಫರ್ಹತ್ ಇ. ನೂರ್ ಜಹೀರ್ ಈ. ಜಮೀಲಾ
3. ಅಮೆರಿಕದಲ್ಲಿ ವೈದ್ಯರಾಗಿದ್ದು ಭಾರತಕ್ಕೆ ಮರಳಿ ಬಂದವರು ಯಾರು?

   ಅ. ಡಾ. ಶಿವರಾಮ ಕಾರಂತ ಆ. ಡಾ. ನಿಜಾಮ್ ಇ. ಡಾ ವಿಜಯ್ ಕುಮಾರ ಈ. ಡಾ. ಕರೀಂ
4. "ಗ್ಲಿಂಪ್ಸಸ್ ಆಪ್ ವರ್ಲ್ಡ ಹಿಸ್ಟರಿ" ಪ್ರಬಂಧ ಬರೆದವರು.

   ಅ. ಗಾಂಧೀಜಿ ಆ. ಸುಭಾಷ್ ಚಂದ್ರ ಬೋಸ್ ಇ. ಜವಹರಲಾಲ್ ನೆಹರು ಈ. ವಲ್ಲಬಾಯ್ ಪಟೇಲ್
5. ಇದ್ದತ್ ಎಂಬುದು ಯಾರ ಪದ್ಧತಿ?

   ಅ. ಹಿಂದು. ಆ. ಮುಸ್ಲಿಂ ಇ. ಜೈನ ಈ. ಪಾರ್ಸಿ
6. ಮನುಷ್ಯ ಯಾವಾಗಿನಿಂದ ಸಂವಹನ ಮಾಡುತ್ತಿದ್ದಾನೆ?

   ಅ. ಹುಟ್ಟಿನಿಂದ ಆ. ಬೆಳೆದ ನಂತರ ಇ. ಶಿಕ್ಷಣದಿಂದ ಈ. ಕಾಲೇಜಿನಿಂದ
7. ಅಂಬೇಡ್ಕರ್ ರವರು ನ್ಯೂಯಾರ್ಕ್ ನ ಯಾವ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿದರು?

   ಅ. ಕೊಲಂಬಿಯ ಆ. ವಾಷಿಂಗ್ ಟನ್ ಇ. ಹಾರ್ವರ್ಡ್. ಈ. ಕೇಂಬ್ರಿಡ್ಜ್
8. ಭೂಮಿಯನ್ನು ಎಷ್ಟು ವಸ್ತುಗಳು ಆವರಿಸಿದೆಯೆಂದು ಲೇಖಕರು ಹೇಳಿದ್ದಾರೆ?

   ಅ. ನಾಲ್ಕು. ಆ. ಎಂಟು ಇ. ಆರು ಈ. ಎರಡು
9. ಕೋಳಿ ಕಾಲಿನ ಹಾಗೆ ಕೆದರಿ ಬೆಳೆದು ನಿಂತಿದ್ದುದು ಏನು?

   ಅ. ರಾಗಿ ತೆನೆ ಆ. ಜೋಳದ ತೆನೆ ಇ. ಸಜ್ಜೆ ತೆನೆ ಈ. ಗೋಧಿ ತೆನೆ
10. ಜ್ವಾಲಾಶೆಟ್ಟಿಯ ಮನೆ ಆಳು ಯಾರು?

    ಅ. ವೀರ ಆ. ಈರ ಇ. ಬೀರ ಈ. ಮಾರ

*********

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY, BENGALURU